# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 93/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : ಸುರೇಂದ್ರ ಆರ್ | **ಪಿಡಬ್ಲ್ಯೂ ಃ** | 25 |
| **ತಂದೆಯ / ಗಂಡನ ಹೆಸರು** | : ರಂಗಯ್ಯ | **ಸಿಡಬ್ಲ್ಯೂ ಃ** | 51 |
| **ವಯಸ್ಸು** | : 52 ವರ್ಷ | | |
| **ಉದ್ಯೋಗ** | : ಸಹಾಯಕ ಕಾರ್ಯನಿರ್ವಾಹಕ ಅಬಿಯಂತರರು , ಜ್ಯೋತಿನಗರ ಉಪ ವಿಭಾಗ , ಸೆಸ್ಕಾಂ , ಮೈಸೂರು | | |
| **ವಾಸಸ್ಥಳ** | : ಮೈಸೂರು | | |

**ಸಾಕ್ಷಿಯನ್ನು ಈ ದಿನ ದಿಃ 30.11.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನಾನು ನವೆಂಬರ್ 2019 ರಿಂದ ಫೆಬ್ರವರಿ 2022 ರವರಿಗೆ ಮೈಸೂರಿನ ಎನ್ ಆರ್ ಮೊಹಲ್ಲಾ ಉಪ ವಿಭಾಗ, ಸೆಸ್ಕಾಂ , ಮೈಸೂರು ನಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಬಿಯಂತರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ, ಪ್ರಕರಣದ ತನಿಖಾಧಿಕಾರಿಯವರು ದಿ.06.03.2021 ರಂದು ನಮ್ಮ ಕಚೇರಿಗೆ ಪತ್ರಿಸಿ , ಎನ್ ಆರ್ ಮೊಹಲ್ಲಾ ಶಾಖಾ ವ್ಯಾಪ್ತಿಗೆ ಬರುವಂತಹ ಕುರಿ ಮಂಡಿ ಎ ಬ್ಲಾಕ್ , ಮನೆ ನಂಬರ್ 50 ರಲ್ಲಿ ವಿದ್ಯುತ್ ಸಂಪರ್ಕ

ದಿ.14.12.2020 ಮತ್ತು ದಿ.15.12.2020 ರಂದು ಇತ್ತೇ ಇಲ್ಲವೇ ಎನ್ನುವ ಬಗ್ಗೆ ವರದಿಯನ್ನು ನೀಡಬೇಕೆಂದು ಕೋರಿದ್ದರು.

3. ಅದರಂತೆ ನಮ್ಮ ಎನ್ ಆರ್ ಶಾಖೆಯ ಶಾಖಾಧಿಕಾರಿಗಳು ಸದರಿ ಸ್ಥಳಕ್ಕೆ ಭೇಟಿ ನೀಡಿ , 11**KV** ಕಲ್ಯಾಣಗಿರಿ ಮಾರ್ಗ ಕ್ಕೆ ಸಂರ್ಪ ಗೊಂಡಿರುವ 100 **KVA** ಕುರಿಮಂಡಿ ಪರಿವರ್ತಕದಲ್ಲಿ ದಿ. 14.12.2020 ಮತ್ತು ದಿ.15.12.2020 ರಂದು ವಿದ್ಯುತ್ ಸಂಪರ್ಕವಿತ್ತು ಎನ್ನುವುದನ್ನು ಕಂಡು ಕೊಂಡು ನನಗೆ ವರದಿಯನ್ನು ಸಲ್ಲಿಸಿದರು. ವರದಿಯೊಂದಿಗೆ ಲಾಗ್ ಬುಕ್ ನ ಪ್ರತಿಯನ್ನು ಸಹ ಸಲ್ಲಿಸಿದರು. ಅದರಂತೆ ದಿ.17.03.2021 ರಂದು ನಾನು ನನ್ನ ವರದಿಯನ್ನು ಸಂಬಂದಪಟ್ಟ ತನಿಖಾಧಿಕಾರಿಯವರಿಗೆ ಕಳುಹಿಸಿರುತ್ತೇನೆ. ನಾನು ನೀಡಿದ ವರದಿಯನ್ನು ಈಗ ನೋಡುತ್ತಿದ್ದೇನೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ಈಗ ನಿಪಿ.63 ಎಂತಲೂ , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ.63(ಎ) ಎಂತಲೂ ಮತ್ತು ಶಾಖಾಧಿಕಾರಿಯವರು ನೀಡಿದ ವರದಿಯನ್ನು ನಿಪಿ.64 ಎಂತಲೂ, ಅದರೊಂದಿಗೆ ಲಗತ್ತಿಸಲಾದ ಲಾಗ್ ಪುಸ್ತಕದ ಪ್ರತಿಯನ್ನು ನಿಪಿ.64(ಎ) ಎಂತಲೂ ಗುರುತುಪಡಿಸಿಕೊಳ್ಳಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ

4. ತನಿಖಾಧಿಕಾರಿಯವರ ಕೋರಿಕೆಯ ಪತ್ರ ನಮ್ಮ ಕಚೇರಿಯ ರವಾನೆ ವಿಭಾಗಕ್ಕೆ ಬಂದಿತ್ತು. ನಂತರ ನನ್ನ ಮುಂದೆ ಇಟ್ಟರು. ಆ ಪತ್ರದಲ್ಲಿ ಕೃತ್ಯ ನಡೆದ ಸ್ಥಳದ ವಿಳಾಸವನ್ನು ನೀಡಿದ್ದರು. ಅದು ಮೈಸೂರಿನ ಕುರಿ ಮಂಡಿ, ಎ ಬ್ಲಾಕ್ , ಮನೆ ನಂಬರ್ 50 ಎಂದಿತ್ತು.

ಲಾಗ್ ಪುಸ್ತಕ ದಲ್ಲಿ ನಮೂದಿಸಿರುವ ಅಂಶಗಳನ್ನು ನಾನು ಬರೆದಿರುವುದಿಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ. ಅದನ್ನು ಉಪ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುವ ನಿರ್ವಾಹಕ ಅಭಿಯಂತರರು ಬರೆದಿರುತ್ತಾರೆ ಎಂದು. ದಿನಾಂಕ 14 ಮತ್ತು ದಿನಾಂಕ 15 ರಂದು ಅಲ್ಲಿ ಯಾರು ನಿರ್ವಾಹಕ ಅಬಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು ಎನ್ನುವುದು ನೆನಪಿಲ್ಲ. ತನಿಖಾಧಿಕಾರಿಯವರಿಗೆ ಸಹಾಯ ಮಾಡುವ ಸಲುವಾಗಿ ಅವರ ಕೋರಿಕೆಯಂತೆ ನಾನು ನಿಪಿ.63, 64 ಮತ್ತು 64(ಎ) ಗಳನ್ನು ನೀಡಿರುತ್ತೇನೆ ಎನ್ನುವುದು ಸರಿಯಲ್ಲ. ದಿನಾಂಕ 14 ಮತ್ತು ದಿನಾಂಕ 15 ರ ವಿದ್ಯುತ್ ಸಂಪರ್ಕದ ಬಾಬ್ತು ನನಗೆ ವಾಸ್ತವ ಅಂಶ ತಿಳಿದಿರಲಿಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು
ಮೈಸೂರು.